## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 249
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 28.01.2026
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸಲು; ಗ್ರಾಮೀಣ ಮಟ್ಟದ ಸರ್ಕಾರಿ ಇಲಾಖಾ ಕಚೇರಿಗಳನ್ನು ಸ್ಥಾಪಿಸಲು ಹಾಗೂ ಆಸ್ತಿ ಸೃಜನೆ ಮಾಡುವ ಉದ್ದೇಶದಿಂದ ಕಂದಾಯ ಇಲಾಖೆಯಿಂದ ಸರ್ಕಾರಿ ಜಾಗಗಳನ್ನು ಮಂಜೂರು ಮಾಡಲಾಗುತ್ತಿದೆಯೇ; ಈ ಸಂಬಂಧ ಸಲ್ಲಿಸಲಾದ ಪ್ರಸ್ತಾವನೆಗಳು ಎಷ್ಟು ಅವಧಿಯಿಂದ ಬಾಕಿಯಿವೆ; | ಗ್ರಾಮ ಪಂಚಾಯಿತಿಗಳಿಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸಲು, ಗ್ರಾಮೀಣ ಮಟ್ಟದ ಸರ್ಕಾರಿ ಇಲಾಖಾ ಕಚೇರಿಗಳನ್ನು ಸ್ಥಾಪಿಸಲು ಹಾಗೂ ಆಸ್ತಿ ಸೃಜನೆ ಮಾಡುವ ಉದ್ದೇಶದಿಂದ ಕಂದಾಯ ಇಲಾಖೆಯಿಂದ ಸರ್ಕಾರಿ ಜಮೀನನ್ನು ಕಾಯ್ದಿರಿಸಲು/ಮಂಜೂರು ಮಾಡುವಂತೆ ಸಂಬಂಧಪಟ್ಟ ಇಲಾಖೆಗಳು ಕೋರಿಕೆ ಸಲ್ಲಿಸಿದ್ದಲ್ಲಿ ಅಂತಹ ಇಲಾಖೆಗಳಿಗೆ ಜಮೀನನ್ನು ಕಾಯ್ದಿರಿಸಿ/ ಮಂಜೂರು ಮಾಡಲಾಗುತ್ತಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕುಮ್ಕಿ, ಗೋಮಾಳ, ಪೊರಂಬೋಕು, ಅರಣ್ಯ ಆಕ್ಷೇಪ ಇತ್ಯಾದಿ ಕಾರಣಗಳಿರುವ ಪ್ರಸ್ತಾವನೆಗಳು ಸುಮಾರು 1 ವರ್ಷದಿಂದ ಬಾಕಿಯಿರುತ್ತದೆ. |
| (ಆ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಗ್ರಾಮ ಪಂಚಾಯಿತಗಳಿಂದ ಪಂಚಾಯಿತಿ ಕಟ್ಟಡ, ಆಟದ ಮೈದಾನ, ಪಶು ಚಿಕಿತ್ಸಾ ಕೇಂದ್ರ ಹಾಗೂ ಇತರ ಸರ್ಕಾರಿ ಇಲಾಖೆಗಳ ಕಟ್ಟಡ/ಕಚೇರಿ ನಿವೇಶನಗಳಿಗಾಗಿ ಸ್ವೀಕೃತಗೊಂಡಿರುವ ಪ್ರಸ್ತಾವನೆಗಳ ಒಟ್ಟು ಸಂಖ್ಯೆ ಎಷ್ಟು; | ಗ್ರಾಮ ಪಂಚಾಯಿತಗಳಿಂದ ಪಂಚಾಯಿತಿ ಕಟ್ಟಡ, ಆಟದ ಮೈದಾನ, ಪಶು ಚಿಕಿತ್ಸಾ ಕೇಂದ್ರ ಹಾಗೂ ಇತರ ಸರ್ಕಾರಿ ಇಲಾಖೆಗಳ ಕಟ್ಟಡ/ಕಚೇರಿ ನಿವೇಶನಗಳಿಗಾಗಿ ಉಡುಪಿ ಜಿಲ್ಲೆಯಲ್ಲಿ 157 ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 376 ಪ್ರಸ್ತಾವನೆಗಳು ಸ್ವೀಕೃತಗೊಂಡಿರುತ್ತವೆ. |
| (ಇ) | ಅನೇಕ ಸಂದರ್ಭಗಳಲ್ಲಿ ಭೂ ಮಂಜೂರಾತಿಯನ್ನು ಪಹಣಿಯ 11ನೇ ಕಾಲಂನಲ್ಲಿ ಮಾತ್ರ ದಾಖಲಿಸಲಾಗುತ್ತಿದ್ದು, ಕಂದಾಯ ಇಲಾಖೆ ಹಾಗೂ ಜಾಗ ಮಂಜೂರಾತಿ ಪಡೆದ , ಇಲಾಖೆಗಳ - ನಿರ್ಲಕ್ಷದಿಂದಾಗಿ ಸರ್ಕಾರಿ ಜಾಗಗಳ ಸೂಕ್ತ ಸ್ವಾಧೀನ ಮತ್ತು ನಿರ್ವಹಣೆ ಇಲ್ಲದೆ ಅತಿಕ್ರಮಣವಾಗುತ್ತಿರುವ | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರಡಿ ಮಂಜೂರಾದ ಜಮೀನುಗಳ ಮಾಹಿತಿಯನ್ನು RTC ಯ ಕಾಲಂ 9 ರಲ್ಲಿ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 71 ರನ್ವಯ ಕಾಯ್ದಿರಿಸಲಾಗುವ ಜಮೀನುಗಳ ಮಾಹಿತಿಯನ್ನು RTC ಯ ಕಾಲಂ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಸದರಿ ಇಲಾಖೆಗಳು ಜಾಗಗಳ ಪಹಣಿಯನ್ನು ತಮ್ಮ ಹೆಸರಿಗೆ ದಾಖಲಿಸಲು ಅಗತ್ಯ ಅರಿವು ಮತ್ತು ಸೂಕ್ತ ಸಹಕಾರವನ್ನು ಕಂದಾಯ ಇಲಾಖೆಯಿಂದ ನೀಡಲಾಗಿದೆಯೇ; | 9 ರಲ್ಲಿ ದಾಖಲಿಸಲಾಗುತ್ತದೆ. ಸರ್ಕಾರಿ ಜಾಗಗಳ ಸೂಕ್ತ ಸ್ವಾಧೀನ ಮತ್ತು ನಿರ್ವಹಣೆ ಇಲ್ಲದೆ ಅತಿಕ್ರಮಣವಾಗುತ್ತಿರುವ ಪ್ರಕರಣಗಳಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 192ಎ ರನ್ವಯ ಕ್ರಮಜರುಗಿಸಲು ಅವಕಾಶ ಕಲ್ಪಿಸಲಾಗಿದೆ. |
| (ಈ) | ಇವುಗಳಲ್ಲಿ ಮಂಜೂರಾತಿ ನೀಡಲಾದ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; ಮಂಜೂರಾತಿ ನೀಡದೆ ಬಾಕಿಯಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; ಮಂಜೂರಾತಿ ನೀಡದಿರುವುದಕ್ಕೆ ಕಾರಣಗಳೇನು; ಈ ಪ್ರಸ್ತಾವನೆಗಳು ಪ್ರಸ್ತುತ ಯಾವ ಹಂತದಲ್ಲಿ ಹಾಗೂ ಯಾರ ಬಳಿ ಬಾಕಿಯಿವೆ; ಮಂಜೂರಾತಿಗೆ ಯವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು; | ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಬಾಕಿಯಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ, ನಿಯಮಾನುಸಾರ ಪರಿಶೀಲಿಸಿ ಆಧ್ಯತೆಯಲ್ಲಿ ಜಮೀನು ಕಾಯ್ದಿರಿಸಲು ಕ್ರಮವಹಿಸಲಾಗುತ್ತಿದೆ. |
| (ಉ) | ಮುಂದಿನ ದಿನಗಳಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಮಂಜೂರಾದ ಜಾಗಗಳನ್ನು ಪಹಣಿಯ 9ನೇ ಕಾಲಂನಲ್ಲಿ ದಾಖಲಿಸುವಂತೆ ಸ್ಪಷ್ಟ ಮಾರ್ಗಸೂಚಿ/ನಿರ್ದೇಶನಗಳನ್ನು ನೀಡಲು ಸರ್ಕಾರ ಉದ್ದೇಶಿಸಿರುವುದೇ? | ಕರ್ನಾಟಕ ಭೂಮಂಜೂರಾತಿ ನಿಯಮಗಳು, 1969 ರ ನಿಯಮ 22-ಎ (3) (i) ರಂತೆ ಸರ್ಕಾರಿ ಇಲಾಖೆಗಳಿಗೆ ಜಮೀನುಗಳನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. ಅದರಂತೆ ಪಹಣಿ ಕಲಂ 9 ರಲ್ಲಿ ಮಂಜೂರು ಮಾಡಲಾಗಿರುವ ಇಲಾಖೆಯ ಹೆಸರು ದಾಖಲಿಸಲು ಅವಕಾಶವಿರುತ್ತದೆ. |

(ಕಡತ ಸಂಖ್ಯೆ: ಆರ್‌ಡಿ 12 ಎಲ್‌ಜಿಎ 2026)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: ೨೪೯೮ ಅನುಬಂಧ

ಉಡುಪಿ

| ಶ್ರೀಮಂಜುನಾಥ ಭಂಡಾರಿ, ಇವರ ಚುಕ್ಕೆ ಗುರುತಿನ ಪ್ರಶ್ನೆ : 217(249). | | | | | | | | | | | |
|---|---|---|---|---|---|---|---|---|---|---|---|
| ಗ್ರಾಮ ಪಂಚಾಯತ್ ಗಳಿಂದ ಪಂಚಾಯತ್ ಕಟ್ಟಡ, ಆಟದ ಮೈದಾನ, ಪಶು ಚಿಕಿತ್ಸಾ ಕೇಂದ್ರ ಹಾಗೂ ಇತರ ಸರ್ಕಾರಿ ಇಲಾಖೆಗಳ ಕಟ್ಟಡ/ ಕಛೇರಿ ನಿವೇಶನಗಳಿಗೆ ಸ್ವೀಕೃತಗೊಂಡ ಪ್ರಸ್ತಾವನೆಗಳ ವಿವರ | | | | | | | | | | | |
| ಕ್ರ.ಸಂ | ತಾಲೂಕು | ಸ್ವೀಕೃತಗೊಂಡಿರುವ ಕೋರಿಕೆಗಳ ಸಂಖ್ಯೆ | | | | | ಕಾಯ್ದಿರಿಸಿದ ಸಂಖ್ಯೆ | ತಿರಸ್ಕರಿಸಿದ ಸಂಖ್ಯೆ | ಬಾಕಿ | ಮಂಜೂರಾತಿ ನೀಡದೇ ಇರಲು ಕಾರಣ | ಬಾಕಿ ಅರ್ಜಿಗಳು ಯಾರ ಬಳಿ ಹಾಗೂ ಯಾವ ಹಂತದಲ್ಲಿದೆ |
| | | ಗ್ರಾಮ ಪಂಚಾಯತ್ | | | ಇತರ ಸರ್ಕಾರಿ ಇಲಾಖೆಗಳ ಕಟ್ಟಡ/ ಕಛೇರಿ ನಿವೇಶನ | ಒಟ್ಟು | | | | | |
| | | ಪಂಚಾಯತ್ ಕಟ್ಟಡ | ಆಟದ ಮೈದಾನ | ಪಶು ಚಿಕಿತ್ಸಾ ಕೇಂದ್ರ | | | | | | | |
| 1 | ಕುಂದಾಪುರ | 1 | 1 | 0 | 30 | 32 | 18 | 1 | 13 | ತನಿಖಾ ಹಂತದಲ್ಲಿ ಇರುವುದರಿಂದ | ಕಂದಾಯ ನಿರೀಕ್ಷಕರ ತನಿಖಾ ವರದಿ ಮತ್ತು ಅಳತೆ ಕಾರ್ಯದ ಬಾಬ್ತು ತಾಲೂಕು ಭೂಮಾಪಕರಲ್ಲಿ ಬಾಕಿ ಹಾಗೂ ಇಲಾಖಾ ಅಭಿಪ್ರಾಯ ಕೋರಿ |
| 2 | ಬೈಂದೂರು | 4 | 0 | 0 | 1 | 5 | 4 | 0 | 1 | ತನಿಖಾ ಹಂತದಲ್ಲಿ ಇರುವುದರಿಂದ | ಕಂದಾಯ ನಿರೀಕ್ಷಕರ ತನಿಖಾ ವರದಿ ಮತ್ತು ಅಳತೆ ಕಾರ್ಯದ ಬಾಬ್ತು ತಾಲೂಕು ಭೂಮಾಪಕರಲ್ಲಿ ಬಾಕಿ |
| 3 | ಉಡುಪಿ | 2 | 1 | 0 | 46 | 49 | 33 | 3 | 13 | ತನಿಖಾ ಹಂತದಲ್ಲಿ ಇರುವುದರಿಂದ | ಸದ್ರಿ ಪ್ರಸ್ತಾವನೆಗಳು ಕಂದಾಯ ನಿರೀಕ್ಷಕರ ವರದಿ ಪಡೆಯಲು ಹಾಗೂ ಸರ್ವೇ ಹಂತದಲ್ಲಿ ಬಾಕಿ ಇರುವುದಾಗಿದೆ |

| | | | | | | | | | | | |
|---|---|---|---|---|---|---|---|---|---|---|---|
| 4 | ಬ್ರಹ್ಮಾವರ | 1 | 1 | 5 | 22 | 29 | 16 | 1 | 12 | ತನಿಖಾ ಹಂತದಲ್ಲಿ ಇರುವುದರಿಂದ | ಕಂದಾಯ ನಿರೀಕ್ಷಕರ ತನಿಖಾ ವರದಿ ಮತ್ತು ಅಳತೆ ಕಾರ್ಯದ ಬಾಬ್ತು ತಾಲೂಕು ಭೂಮಾಪಕರಲ್ಲಿ ಬಾಕಿ ಹಾಗೂ ಇಲಾಖಾ ಅಭಿಪ್ರಾಯ ಕೋರಿ |
| 5 | ಕಾಪು | 1 | 0 | 0 | 6 | 7 | 3 | 0 | 4 | ತನಿಖಾ ಹಂತದಲ್ಲಿ ಇರುವುದರಿಂದ | ಕಂದಾಯ ನಿರೀಕ್ಷಕರ ತನಿಖಾ ವರದಿ ಮತ್ತು ಅಳತೆ ಕಾರ್ಯದ ಬಾಬ್ತು ತಾಲೂಕು ಭೂಮಾಪಕರಲ್ಲಿ ಬಾಕಿ |
| 6 | ಕಾರ್ಕಳ | 3 | 5 | 3 | 10 | 21 | 10 | 0 | 11 | ತನಿಖಾ ಹಂತದಲ್ಲಿ ಇರುವುದರಿಂದ | ಕಂದಾಯ ನಿರೀಕ್ಷಕರ ತನಿಖಾ ವರದಿ ಮತ್ತು ಅಳತೆ ಕಾರ್ಯದ ಬಾಬ್ತು ತಾಲೂಕು ಭೂಮಾಪಕರಲ್ಲಿ ಬಾಕಿ ಹಾಗೂ ಇಲಾಖಾ ಅಭಿಪ್ರಾಯ ಕೋರಿ |
| 7 | ಹೆಬ್ರಿ | 1 | 0 | 0 | 13 | 14 | 10 | 0 | 4 | ತನಿಖಾ ಹಂತದಲ್ಲಿ ಇರುವುದರಿಂದ | ಸದ್ರಿ ಪ್ರಸ್ತಾವನೆಗಳು ಕಂದಾಯ ನಿರೀಕ್ಷಕರ ವರದಿ ಪಡೆಯಲು ಹಾಗೂ ಸರ್ವೆ ಹಂತದಲ್ಲಿ ಬಾಕಿ ಇರುವುದಾಗಿದೆ |
| ಒಟ್ಟು | | 13 | 8 | 8 | 128 | 157 | 94 | 5 | 58 | | |

# ದಕ್ಷಿಣ ಕನ್ನಡ

ಗ್ರಾಮ ಪಂಚಾಯತ್ ಗಳಿಂದ ಪಂಚಾಯತ್ ಕಟ್ಟಡ, ಆಟದ ಮೈದಾನ, ಪಶು ಚಿಕಿತ್ಸಾ ಕೇಂದ್ರ ಹಾಗೂ ಇತರ ಸರ್ಕಾರಿ ಇಲಾಖೆಗಳ ಕಟ್ಟಡ/ಕಚೇರಿ ನಿವೇಶನಗಳಿಗೆ ಸ್ವೀಕೃತಗೊಂಡ ಪ್ರಸ್ತಾವನೆಗಳ ಬಗ್ಗೆ.

| ತಾಲೂಕು | ಕೋರಿಕೆ | | | | | ಕಾಯ್ದಿರಿಸಿದ ಸಂಖ್ಯೆ | ತಿರಸ್ಕೃತ ಸಂಖ್ಯೆ | ಬಾಕಿ | ಮಂಜೂರಾತಿ ನೀಡದೇ ಇರಲು ಕಾರಣ | ಬಾಕಿ ಅರ್ಜಿಗಳು ಯಾರ ಬಳಿ ಹಾಗೂ ಯಾವ ಹಂತದಲ್ಲಿವೆ |
|---|---|---|---|---|---|---|---|---|---|---|
| | ಗ್ರಾಮ ಪಂಚಾಯತ್ | | | ಇತರ ಸರ್ಕಾರಿ ಇಲಾಖೆಗಳ ಕಟ್ಟಡ/ಕಚೇರಿ ನಿವೇಶನ | ಒಟ್ಟು | | | | | |
| | ಪಂಚಾಯತ್ ಕಟ್ಟಡ | ಆಟದ ಮೈದಾನ | ಪಶು ಚಿಕಿತ್ಸಾ ಕೇಂದ್ರ | | | | | | | |
| ಮಂಗಳೂರು | 1 | 0 | 3 | 44 | 48 | 28 | 0 | 20 | | ಸದ್ರಿ ಪ್ರಸ್ತಾವನೆಗಳು ಕಂ.ನಿ ತನಿಖಾ ವರದಿ ಪಡೆಯಲು ಹಾಗೂ ಸರ್ವೇ ಹಂತದಲ್ಲಿ ಬಾಕಿ ಇರುವುದಾಗಿದೆ |
| ಬಂಟ್ವಾಳ | 6 | 0 | 0 | 59 | 65 | 49 | 0 | 16 | | ಕಂದಾಯ ನಿರೀಕ್ಷಕರ ಬಳಿ ತನಿಖೆಗೆ, ನಕ್ಷೆ ತಯಾರಿಸುವ ಬಗ್ಗೆ ತಾಲೂಕು ಸರ್ವೇಯರ್ ಬಾಕಿ ಇರುತ್ತವೆ. |
| ಮೂಡಬಿದ್ರೆ | 1 | 4 | 0 | 26 | 31 | 8 | 0 | 23 | | ಅರ್ಜಿಗಳ ನ್ಯೂನ್ಯತೆಗಳು ಸರಿಪಡಿಸುವಂತೆ ಹಾಗು ಕೆಲವು ತನಿಖಾ ಹಂತದಲ್ಲಿ ಮತ್ತು ಸರ್ವೆ ಹಂತದಲ್ಲಿರುತ್ತದೆ |
| ಉಳ್ಳಾಲ | 3 | 2 | 0 | 53 | 58 | 50 | 0 | 8 | ಅರಣ್ಯ | ಕಂದಾಯ ನಿರೀಕ್ಷಕರ ಬಳಿ ತನಿಖೆಗೆ, ನಕ್ಷೆ ತಯಾರಿಸುವ ಬಗ್ಗೆ ತಾಲೂಕು ಸರ್ವೇಯರ್ ಬಾಕಿ ಇರುತ್ತವೆ. |

| | | | | | | | | | |
|---|---|---|---|---|---|---|---|---|---|
| ಮುಲ್ಕಿ | 0 | 1 | 1 | 12 | 14 | 8 | 0 | 6 | ಮತ್ತು ಸಾರ್ವಜನಿಕರ ಆಕ್ಷೇಪಣೆ | ಕಂದಾಯ ನಿರೀಕ್ಷಕರ ಬಳಿ ತನಿಖೆಗೆ, ನಕ್ಷೆ ತಯಾರಿಸುವ ಬಗ್ಗೆ ತಾಲೂಕು ಸರ್ವೇಯರ್ ಬಾಕಿ ಇರುತ್ತವೆ. |
| ಸುಳ್ಯ | 0 | 0 | 0 | 2 | 2 | 0 | 0 | 2 | | |
| ಕಡಬ | 3 | 1 | 0 | 21 | 25 | 21 | 0 | 4 | | ಸದ್ರಿ ಪ್ರಸ್ತಾವನೆಗಳು ಕಂ.ನಿ ತನಿಖಾ ವರದಿ ಪಡೆಯಲು ಹಾಗೂ ಸರ್ವೇ ಹಂತದಲ್ಲಿ ಬಾಕಿ ಇರುವುದಾಗಿದೆ |
| ಬೆಳ್ತಂಗಡಿ | 2 | 5 | 0 | 88 | 95 | 42 | 27 | 26 | | ಕಂದಾಯ ನಿರೀಕ್ಷಕರು, ತಾಲೂಕು ಸರ್ವೇಯರ್ ಮತ್ತು ಅರಣ್ಯ ಇಲಾಖಾ ಅಭಿಪ್ರಾಯಕ್ಕೆ ಬಾಕಿ ಇರುತ್ತವೆ. |
| ಪುತ್ತೂರು | 3 | 2 | 0 | 33 | 38 | 19 | 1 | 18 | | ಜಮೀನು ಗುರುತಿಸುವ ಬಗ್ಗೆ / ನ್ಯೂನತೆ ಸರಿಪಡಿಸುವ ಬಗ್ಗೆ / ಇತರ ಇಲಾಖೆ ಅಭಿಪ್ರಾಯ ಕೋರಿ / ಮೋಜಣಿ ಹಂತದಲ್ಲಿ / ಪ್ರಸ್ತಾವನಾ ಹಂತದಲ್ಲಿದೆ |
| **ಒಟ್ಟು** | **19** | **15** | **4** | **338** | **376** | **225** | **28** | **123** | | |